**ಅಸಲು ದಾವಾ ಸಂಖ್ಯೆ-123/2024** **ಪಿ.ಡಬ್ಲ್ಯೂ:- 1**

ದಿನಾಂಕಃ 24.10.2025 ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-

ಸಾಕ್ಷಿಯು ಸರ್ವೆ ನೋಟೀಸಿನಲ್ಲಿ ತನ್ನ ಸಹಿಯನ್ನು ನೋಡಿ ಒಪ್ಪಿಕೊಂಡಿದ್ದು ಸದರಿ ನೋಟೀಸನ್ನು ನಿಡಿ-1 ಎಂದು ಸಾಕ್ಷಿಯ ಸಹಿಯನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ತದನಂತರ ಸದರಿ ನಿಡಿ-1(ಎ) ಸಹಿ ನನ್ನ ಸಹಿ ಅಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂ.18 ರ ಆಸ್ತಿಯು ಬೀಜೋಗಟ್ಟೆ ಗ್ರಾಮದ ವ್ಯಾಪ್ತಿಯಲ್ಲಿರುವ ಬಗ್ಗೆ ಸಾಕ್ಷಿಗೆ ಪಹಣಿಯನ್ನು ತೋರಿಸಿದ್ದು ಸಾಕ್ಷಿಯು ಪಹಣಿಯನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಈ ದಾವೆಯನ್ನು ನಾನು ಬೀಜೋಗಟ್ಟೆ ಗ್ರಾಮದ ವ್ಯಾಪ್ತಿಯಲ್ಲಿರುವ ಸರ್ವೆ ನಂ.18 ರ ಆಸ್ತಿಗೆ ಸಂಬಂಧಪಟ್ಟಂತೆ ಸಲ್ಲಿಸಿದ್ದೆನು. ದಾವಾ ಆಸ್ತಿಯ ಚಕ್ಕುಬಂಧಿ ಪೂರ್ವಕ್ಕೆ ಕುರುವ ಹಳ್ಳ ಮತ್ತು ಗಡಿ, ಪಶ್ಚಿಮಕ್ಕೆ ದೊಡ್ಡಭೀಮಪ್ಪ ಮತ್ತು ಹುಚ್ಚಪ್ಪ ರೆಡ್ಡಿರವರಿಗೆ ಸೇರಿದ ಜಮೀನು, ಉತ್ತರಕ್ಕೆ ಬೀಜೋಗಟ್ಟೆಯಿಂದ ಹೊನ್ನಾಳಿಗೆ ಹೋಗುವ ಮುಖ್ಯ ರಸ್ತೆ, ದಕ್ಷಿಣಕ್ಕೆ ಹಳ್ಳ. ದಾವಾ ಆಸ್ತಿಯ ಉತ್ತರಕ್ಕಿರುವ ರಸ್ತೆಯು ಈಗ ಟಾರ್ ರಸ್ತೆಯಾಗಿರುತ್ತದೆ ಮತ್ತು ಅದು ಸುಮಾರು 40 ಅಡಿ ಅಗಲ ಇರಬಹುದು. ದಾವಾ ಆಸ್ತಿಯ ದಕ್ಷಿಣಕ್ಕಿರುವ ಹಳ್ಳ ಸುಮಾರು 100 ಅಡಿ ಇರುತ್ತದೆ. ಮೇಲ್ಕಂಡಂತೆ ಹೇಳಿರುವ ಚಕ್ಕುಬಂಧಿಯು ಸುಮಾರು 20 ಎಕರೆಗೆ ಸಂಬಂಧಪಟ್ಟಂತ ಚಕ್ಕುಬಂಧಿಯಾಗಿರುತ್ತದೆ. ಸದರಿ 20 ಎಕರೆ ಜಮೀನು ಸರ್ವೆ ನಂ.18 ರ ಜಮೀನಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಸರ್ವೆ ನಂ.18 ರಲ್ಲಿ 1 ಎಕರೆ 16 ಗುಂಟೆ ವಿಸ್ತೀರ್ಣದ ಜಮೀನು ಇಲ್ಲ ಎಂದರೆ ಸರಿಯಲ್ಲ. ನನಗೆ ಜಮೀನಿನ ಪಹಣಿಯ ಬಗ್ಗೆ ತಿಳುವಳಿಕೆ ಜ್ಞಾನ ಇರುತ್ತದೆ. ಪಹಣಿಗಳಲ್ಲಿ ಎ ಕರಾಬು ಮತ್ತು ಬಿ ಕರಾಬು ಬಗ್ಗೆ ನಮೂದಾಗಿರುವ ವಿಚಾರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ದಾವಾ ಆಸ್ತಿಯನ್ನು 1 ನೇ ವಾದಿ ಲೀಲಾವತಿರವರಿಂದ ಖರೀದಿ ಮಾಡಿರುತ್ತಾರೆ. ಸಾಕ್ಷಿಗೆ ದಾವಾ ಆಸ್ತಿಯು ಲೀಲಾವತಿರವರಿಗೆ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿಯು ದಾವಾ

ಆಸ್ತಿಯು ಈ ಮೊದಲು ನಮ್ಮ ಅಜ್ಜನಿಗೆ ಸೇರಿದ್ದು ನಮ್ಮ ಅಜ್ಜನಿಂದ ಲೀಲಾವತಿಯ ಯಜಮಾನರಾದ ಮಲ್ಲಿಕಾರ್ಜುನಪ್ಪ ಖರೀದಿ ಮಾಡಿರುತ್ತಾರೆ. ಮಲ್ಲಿಕಾರ್ಜುನಪ್ಪ ಮರಣ ಹೊಂದಿದ ನಂತರ ಲೀಲಾವತಿಯ ಹೆಸರಿಗೆ ಖಾತೆ ಪಹಣಿಯಾಗಿದ್ದು ಅವರಿಂದ ನಮ್ಮ ತಂದೆಯವರು ಖರೀದಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯನ್ನು ನಮಂ ತಂದೆಯವರು ಖರೀದಿ ಮಾಡುವ ಪೂರ್ವದಲ್ಲಿ ಮಲ್ಲಿಕಾರ್ಜುನಪ್ಪರವರ ಹೆಸರಿಗೆ ಅ ಕರಾಬು, ಬ ಕರಾಬು ಮತ್ತು ಕೃಷಿ ಯೋಗ್ಯ ಜಮೀನು ಎಷ್ಟು ಇತ್ತು ಎಂಬ ಬಗ್ಗೆ ವಿಚಾರ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು 1 ಎಕರೆ 16 ಗುಂಟೆ ಕೃಷಿ ಯೋಗ್ಯ ಜಮೀನು, ಅ ಕರಾಬು 16 ಗುಂಟೆ ಜಮೀನು ಎಂದು ತಿಳಿದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ಹಳ್ಳ, ರಸ್ತೆ, ಕಾಲುವೆ ಜಮೀನನ್ನು ಬ ಕರಾಬು ಎಂದು, ಒಂದು ಜಮೀನಿನ ಪಕ್ಕದಲ್ಲಿ ಕೃಷಿ ಚಟುವಟಿಕೆಗಳನ್ನು ಮಾಡಲು ಯೋಗ್ಯವಲ್ಲದ ಬೀಳುಬಿದ್ದಿರುವ ಜಮೀನನ್ನು ಅ ಕರಾಬು ಜಮೀನು ಎಂದು ಕರೆಯುತ್ತಾರೆ ಎಂದು ನುಡಿಯುತ್ತಾರೆ. 1 ಎಕರೆ 16 ಗುಂಟೆ ಜಮೀನಿನಲ್ಲಿ ನಾವು ಈಗ ಭತ್ತವನ್ನು ಬೆಳೆಯುತ್ತಿದ್ದೇವೆ. ನಾವು ಈಗ ಭತ್ತವನ್ನು ಬೆಳೆಯುತ್ತಿರುವ 1 ಎಕರೆ 16 ಗುಂಟೆ ಜಮೀನಿನ ಚಕ್ಕುಬಂಧಿ ಪೂರ್ವಕ್ಕೆ ಕೋಡಿ ಹಳ್ಳ ಮತ್ತು ಕುರುವ ಗಡಿ, ಪಶ್ಚಿಮಕ್ಕೆ ದೊಡ್ಡಭೀಮಪ್ಪರವರ ಜಮೀನು, ಉತ್ತರಕ್ಕೆ ಬಸಪ್ಪರೆಡ್ಡಿರವರ ಜಮೀನು, ದಕ್ಷಿಣಕ್ಕೆ ಈಶ್ವರನಾಯ್ಕರವರ ಜಮೀನು. ಹಳ್ಳದ ಜಾಗವನ್ನು ಬ ಕರಾಬು ಜಮೀನು ಎಂದು ಕರೆಯುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ಪಹಣಿಯಲ್ಲಿ 16 ಗುಂಟೆ ಜಮೀನು ಬ ಕರಾಬು ಜಮೀನು ಎಂದು ನಮೂದಾಗಿದೆ ಎಂದರೆ ನಮೂದಾಗಿರಬಹುದು ಎಂದು ನುಡಿಯುತ್ತಾರೆ. ಬ ಕರಾಬಿನ ಜಮೀನಿನ ಮಾಲೀಕತ್ವ ಯಾವುದೇ ವ್ಯಕ್ತಿಗೆ ಇರುವುದಿಲ್ಲ ಅದು ಸರ್ಕಾರಕ್ಕೆ ಸೇರಿದ ಜಾಗ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ನಿಪಿ-8 ಆರ್ ಟಿ ಸಿ ಯಲ್ಲಿಯೂ ಸಹ 1 ಎಕರೆ 20 ಗುಂಟೆ ಜಮೀನು ಬ ಕರಾಬು ಎಂದು ನಮೂದಾಗಿದೆ ಎಂದರೆ ನಮೂದಾಗಿರಬಹುದು ಎಂದು ನುಡಿಯುತ್ತಾರೆ. ನಿಪಿ-8 ಪಹಣಿಯಲ್ಲಿರುವ 1 ಎಕರೆ 20 ಗುಂಟೆ ಬ ಕರಾಬು ಜಮೀನಿನಲ್ಲಿಯೇ ದಾವಾ ಪತ್ರದಲ್ಲಿ ನಮೂದಾಗಿರುವ 16 ಗುಂಟೆ ಬ ಕರಾಬು ಜಮೀನು ಬರುತ್ತದೆ ಎಂದರೆ ಸರಿ. ನಿಪಿ-8

ಪಹಣಿಯಲ್ಲಿರುವ 1 ಎಕರೆ 20 ಗುಂಟೆ ಬ ಕರಾಬು ಜಮೀನು ಬೀಜೋಗಟ್ಟೆಯಿಂದ ಹೊನ್ನಾಳಿಗೆ ಬರುವ ಟಾರ್ ರಸ್ತೆಗೆ ಸಂಬಂಧಿಸಿದ ಜಾಗ ಎಂದರೆ ನನಗೆ ಗೊತ್ತಿಲ್ಲ.

ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.